




# ಜಗತ್ತಿನ ಅತಿದೊಡ್ಡ ‘ಪದಬಂಧ’

ಈ ಕಟ್ಟಡದ ಹೊರಭಾಗದಲ್ಲಿ ಸಂಜೆಯಾಗುತ್ತಿದ್ದಂತೆ ಜನರು ಜಮಾಯಿಸತೊಡಗುತ್ತಾರೆ. ಯಾಕಂತೀರಾ? ಪದಬಂಧ ಆಡೋದಕ್ಕೆ!



‘ಪದಬಂಧ’ ಅಥವಾ ಕ್ರಾಸ್‌ವರ್ಡ್ ನಿಮಗೆಲ್ಲ ತಿಳಿದಿರಬಹುದು. ಅತ್ಯಂತ ಜನಪ್ರಿಯವಾಗಿರುವ ಈ ಆಟ ಪ್ರತಿದಿನ ಹೊಸ ರೂಪದಲ್ಲಿ ನಿಮ್ಮೆದುರಿನ ದಿನಪತ್ರಿಕೆಯಲ್ಲೋ, ವಾರಪತ್ರಿಕೆಯಲ್ಲೋ ಕಾಣಿಸಿಕೊಳ್ಳುತ್ತದೆ. ಹೆಚ್ಚಿನ ಜನರಿಗೆ ಇದೊಂದು ಸಮಯ ಕೊಲ್ಲುವ ಆಟವಾದರೆ, ಕೆಲವರಿಗೆ ಪದ ಭಂಡಾರವನ್ನು ಬೆಳೆಸುವ ಆಟ.

ಪದಬಂಧದ ಹುಚ್ಚೇ ಅಂಥದ್ದು. ಉಕ್ರೇನಿನ ಲ್ವೋವ್ ಎಂಬಲ್ಲಿರುವ ಈ ಬೃಹತ್ ಪದಬಂಧ ಕಟ್ಟಡವನ್ನು ನೋಡಿದರೆ ಎಂಥವರೂ ಬೆರಗಾಗುತ್ತಾರೆ. ವಸತಿ ಸಮುಚ್ಚಯವಾಗಿರುವ ಈ ಕಟ್ಟಡದ ಹೊರಭಾಗದಲ್ಲಿ ಸಂಜೆಯಾಗುತ್ತಿದ್ದಂತೆ ಜನರು ಜಮಾಯಿಸತೊಡಗುತ್ತಾರೆ. ಯಾಕಂತೀರಾ? ಪದಬಂಧ ಆಡೋದಕ್ಕೆ!

ಲ್ವೋವ್ ನಗರದ ಕಟ್ಟಡದ ಗೋಡೆಯೊಂದನ್ನು ಇಡೀ ಆವರಿಸಿಕೊಂಡಿರುವ ಈ ಪದಬಂಧ ಜಗತ್ತಿನ ಅತಿ ದೊಡ್ಡ ಪದಬಂಧ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 34 ಮೇಲಿನಿಂದ ಕೆಳಕ್ಕೆ ಹಾಗೂ 19 ಎಡದಿಂದ ಬಲಕ್ಕೆ ಇರುವ ಈ ಪದಬಂಧದಲ್ಲಿ ಹೆಚ್ಚಿನ ‘ಕ್ಲೂ’ಗಳೂ ಲ್ವೋವ್ ನಗರಕ್ಕೆ ಸಂಬಂಧಿಸಿದವು. ಅಂದರೆ ಈ ನಗರದ ಹೊಟೇಲುಗಳು, ಥಿಯೇಟರ್‌ಗಳು, ಪಾರ್ಕ್‌ಗಳು ಮುಂತಾದವುಗಳ ಬಗ್ಗೆ ಕ್ಲೂಗಳಿರುತ್ತವೆ.

ಈ ಪದಬಂಧದ ಕ್ಲೂಗಳನ್ನು ಕೆಲವೊಂದು ನಿರ್ದಿಷ್ಟ ಸ್ಥಳಗಳಲ್ಲಿ ತರಿಸುತ್ತಾರೆ. ಪದಬಂಧದ ಉತ್ತರಗಳನ್ನು ಪ್ರತಿದಿನ ರಾತ್ರಿ ಈ ಕಟ್ಟಡದಲ್ಲಿ ನಿಯೋನ್ ಅಕ್ಷರಗಳ ರೂಪದಲ್ಲಿ ಪ್ರದರ್ಶಿಸುತ್ತಾರೆ.

ಅಂದ ಹಾಗೆ ಈ ಪದಬಂಧ ರಷ್ಯನ್ ಭಾಷೆಯಲ್ಲಿದೆ. ಇಲ್ಲವಾದಲ್ಲಿ ನೀವೂ ಒಂದು ಕೈ ನೋಡಬಹುದಿತ್ತು, ಅಲ್ವೆ?

■ **ಹಳೆಮನೆ**